ನಾಟಕದ ಮೂಲಕ ಗಾಂಧೀಜಿ ಮೌಲ್ಯಗಳ ಶೋಧ

ಉಷಾ ಪ್ರೆಸಿಲ್ಲಾ ಅಂಬ್ರೋಸ್

ಗಾಂಧೀಜಿಯವರ 150ನೇ ಜನ್ಮದಿನಾಚರಣೆ ಸಂದರ್ಭದಲ್ಲಿ ಶಾಲಾ ಮಕ್ಕಳು ಮತ್ತು ಶಿಕ್ಷಕರನ್ನು ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ, ಗಾಂಧೀಜಿಯ ಬದುಕು, ಚಿಂತನೆಗಳು ಮತ್ತು ಅವರು ಬಲವಾಗಿ ನಂಬಿದ್ದ ಮೌಲ್ಯಗಳ ಕುರಿತಾದ ಅನುಭವಗಳನ್ನು ಕಟ್ಟಿಕೊಡಲು ನಾವು ಯೋಜಿಸಿದೆವು. ಇದನ್ನು ಒಂದಷ್ಟು ಪ್ರೇಕ್ಷಕರ ಮುಂದೆ ವೇದಿಕೆಯಲ್ಲಿ ಪ್ರದರ್ಶಿಸಲು ನಾವು ತೀರ್ಮಾನಿಸಿದೆವು. ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಕ್ಷೇತ್ರ ಸದಸ್ಯರ ಜೊತೆಗೆ ಕೊಪ್ಪಳದ ಟೀಚರ್ಸ್ ಥಿಯೇಟರ್ ಗ್ರೂಪ್ ಮತ್ತು ನಂದೀಶ್ ಕುಮಾರ್ ಈ ಕಾರ್ಯಕ್ರಮವನ್ನು ಸಂಯೋಜಿಸಿದರು. ಮೊದಲಿಗೆ ನಾವು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಗಾಂಧೀಜಿಯವರ ಬದುಕಿನ ಬಗ್ಗೆ ಕಲಿಯಲು ಆಸಕ್ತಿ ಹುಟ್ಟುವಂತೆ ಮಾಡಲು ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಂಡೆವು. ನಾಲ್ಕು ಕಿರು ನಾಟಕಗಳಲ್ಲಿ ನಟಿಸಲು ಮಕ್ಕಳನ್ನು ಆಯ್ಕೆ ಮಾಡುವುದು ಮುಖ್ಯವಾಗಿತ್ತು. ಎಲ್ಲಾ ಮಾಧ್ಯಮಿಕ ಶಾಲೆಯ ಮಕ್ಕಳನ್ನು ಒಂದು ಕಡೆ ಸಮಾವೇಶಗೊಳಿಸಿ, ಎಲ್ಲರೂ ಪಾಲ್ಗೊಳ್ಳಲು ಅನುಕೂಲವಾಗುವಂತೆ ಕೆಲವು ತಮಾಷೆಯ ಸರಳ ಆಟಗಳನ್ನು ನಡೆಸಿದೆವು. ನಂತರ ಮಕ್ಕಳ ಅಭಿಪ್ರಾಯಗಳನ್ನೂ ಸಂಗ್ರಹಿಸಿ ನಾಟಕದ ಗುಂಪುಗಳನ್ನು ರಚಿಸಲಾಯಿತು.

ಮಕ್ಕಳು ತಮ್ಮ ತರಗತಿಗಳನ್ನಾದರೂ ತಪ್ಪಿಸಿಕೊಳ್ಳುತ್ತಿದ್ದರು, ಆದರೆ ನಾಟಕದ ಅಭ್ಯಾಸವರ್ಗಗಳಿಗೆ ಮಾತ್ರ ತಪ್ಪದೆ ಹಾಜರಾಗುತ್ತಿದ್ದರು. ಗಾಂಧೀಜಿಯ ಪಾತ್ರವನ್ನು ತಮ್ಮದಾಗಿಸಿಕೊಳ್ಳಲು ಅವರು ಪರಸ್ಪರ ಸ್ಪರ್ಧೆಯಲ್ಲಿ ತೊಡಗಿದ್ದರು. ತಮ್ಮ ತಲೆಗೂದಲನ್ನು ಬೋಳಿಸಿಕೊಳ್ಳಲೂ ಅವರು ಸಿದ್ಧರಿದ್ದರು! ಬೆಳಗ್ಗೆ ಶಾಲೆಯ ಗಂಟೆ ಬಾರಿಸುವುದಕ್ಕೂ ಮುನ್ನವೇ ಟೀಚರ್ಸ್ ಲರ್ನಿಂಗ್ ಸೆಂಟರ್‌ನಲ್ಲಿ (ಟಿ.ಎಲ್.ಸಿ) ಎಲ್ಲರೂ ಸೇರಿ ನಾಟಕದ ಅಭ್ಯಾಸ ಆರಂಭಿಸುತ್ತಿದ್ದರು. ಅಲ್ಲದೆ, ಸಂಜೆ ಶಾಲೆ ಬಿಟ್ಟ ಬಳಿಕ, ಕತ್ತಲು ಆವರಿಸುತ್ತಿದ್ದರೂ ಕೇಂದ್ರದಿಂದ ಹೊರಡಲು ಅವರಿಗೆ ಮನಸ್ಸೇ ಇರುತ್ತಿರಲಿಲ್ಲ. ನಾಟಕ ಅಭ್ಯಾಸದ ಮೂಲಕ ಗಾಂಧೀಜಿಯವರನ್ನು ಅರ್ಥ ಮಾಡಿಕೊಳ್ಳುತ್ತಾ ಮೋಜಿನೊಂದಿಗೆ ಜೊತೆಗೆ ಕಲಿಯಲು ಈ ನಮ್ಮ 'ಗಾಂಧಿ ನಾಟಕೋತ್ಸವ ವು ಎಲ್ಲಾ ಮಕ್ಕಳಿಗೂ ಒಳ್ಳೆಯ ಅವಕಾಶವನ್ನು ಒದಗಿಸಿತು ಎಂದು ನಮಗೂ, ಶಿಕ್ಷಕರಿಗೂ ಮನದಟ್ಟಾಯಿತು. ನಾವು ಅವರೊಂದಿಗೆ ಬೆರೆತು ಆತ್ಮೀಯತೆಯಿಂದ ಮಾತನಾಡುತ್ತಾ ಹೋದಂತೆ ಅವರು ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಹಂಚಿಕೊಳ್ಳತೊಡಗಿದರು. ಮಕ್ಕಳಿಗೆ ಮಹತ್ವದ ವಿಷಯವನ್ನು ಆಸಕ್ತಿಯಿಂದ ಮತ್ತು ಮೋಜಿನೊಂದಿಗೆ ಕಲಿಸಿ ಮಕ್ಕಳ ಮನಸ್ಸಿನಲ್ಲಿ ಅಚ್ಚೊತ್ತುವಂತೆ ಮಾಡಲು ರಂಗಭೂಮಿಯು ಅದ್ಭುತ ಮತ್ತು ಸರಳವಾದ ಮಾಧ್ಯಮ ಎಂಬ ಅಂಶ ಈ ಮೂಲಕ ಸ್ಪಷ್ಟವಾಯಿತು. ಹೀಗೆ, ಈ ಕಲಿಕೆಯ ಪ್ರಕ್ರಿಯೆಯಲ್ಲಿ ಮಕ್ಕಳು ಮಾತ್ರ ಕಲಿಯದೆ, ನಾವೂ ಹೊಸ ಸಂಗತಿಗಳನ್ನು ಅವರಿಂದ ಕಲಿತೆವು.

ನಾವು ನಾಟಕದ ತಿರುಳು ಮತ್ತು ಚೌಕಟ್ಟಿನ ಬಗ್ಗೆ ಮಕ್ಕಳೊಂದಿಗೆ ಚರ್ಚಿಸಿದೆವು. ಅವರು ಗಾಂಧೀಜಿಯ ಬಗ್ಗೆ ತಮಗೆ ತಿಳಿದ ವಿಷಯಗಳನ್ನು ಹಂಚಿಕೊಂಡರು. ಇಂದಿನ ಜಗತ್ತಿಗೆ ಗಾಂಧೀಜಿಯ ಪ್ರಸ್ತುತತೆಯ ಬಗ್ಗೆ ಹೇಳಿದಾಗ ಮಕ್ಕಳು ಮಂತ್ರಮುಗ್ಧರಾದರು. ದಕ್ಷಿಣ ಆಫ್ರಿಕಾದಲ್ಲಿ ಕ್ಷೌರಿಕನೊಬ್ಬ ಗಾಂಧೀಜಿಯ ವರನ್ನು ಗದರಿಸಿದ್ದನಲ್ಲದೆ, 'ಕಪ್ಪು ವರ್ಣೀಯ'ನ ಕೂದಲು ಕತ್ತರಿಸಲು ನಿರಾಕರಿಸಿದ್ದನೆಂಬ ವಿಚಾರ ತಿಳಿದು ಮಕ್ಕಳು ಆಶ್ಚರ್ಯಚಕಿತರಾದರು. ಈ ಸಂಗತಿಗಳನ್ನೆಲ್ಲ ಕೇಳಿಸಿಕೊಂಡ ವಿದ್ಯಾರ್ಥಿಗಳು ನಾಟಕದ ಸಂಭಾಷಣೆಗಳನ್ನು ದೈನಂದಿನ ಬದುಕಿನ ಸಾದಾ ಭಾಷೆಯಲ್ಲಿ ಹೇಳತೊಡಗಿದರು.

ಗಾಂಧೀಜಿ ಸ್ವತಃ ಬ್ಯಾರಿಸ್ಟರ್ ಆಗಿದ್ದರೂ ಚರಕದಲ್ಲಿ ನೂಲು ತೆಗೆದು ಬಟ್ಟೆ ತಯಾರಿಸುತ್ತಿದ್ದರು, ಸರಳ ಆಹಾರ ಸೇವಿಸುತ್ತಿದ್ದರು, ಕೇವಲ ಎರಡು ತುಂಡು ಬಟ್ಟೆ ಧರಿಸುತ್ತಿದ್ದರು, ತಮ್ಮ ಎಲ್ಲಾ ಕೆಲಸಗಳನ್ನು ತಾವೇ ಮಾಡುತ್ತಿದ್ದರು ಎಂಬ ಬಗ್ಗೆ ಚರ್ಚಿಸಿದೆವು. ಅವರು ಸದಾ ಸ್ವದೇಶಿ ಉತ್ಪನ್ನಗಳನ್ನೇ ಬಳಸುತ್ತಿದ್ದರು ಹಾಗು ಅವರಲ್ಲಿ ಕೆಲವೇ ಕೆಲವು ಸ್ವತ್ತುಗಳಿದ್ದವು. ಎಲ್ಲರನ್ನೂ ಪ್ರೀತಿಸು, ಇತರರ ಬಗ್ಗೆ ಕಾಳಜಿ ತೋರಿಸು, ಕ್ಷಮಿಸು ಮತ್ತು ಯಾರನ್ನೂ ನೋಯಿಸಬೇಡ ಎಂಬುದು ಅವರ ಸಂದೇಶವಾಗಿತ್ತು. ತಮ್ಮ ಕಿರು ನಾಟಕದ ಮೂಲಕ ಮಕ್ಕಳು ಪರಿಸರದ ಕುರಿತ ಗಾಂಧೀಜಿಯವರ ಕಾಳಜಿ ಮತ್ತು ಸ್ವಚ್ಛತೆ ಮುಂತಾದ ಅನೇಕ ಅಭ್ಯಾಸಗಳನ್ನು ಅಭಿನಯಿಸಿ ತೋರಿಸಿದರು.

ಮಕ್ಕಳ ಮೇಲೆ ಪರಿಣಾಮ

ಗಬ್ಬರ್‌ನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ (ಜಿಹೆಚ್‌ಪಿಎಸ್) ಮಲಯಾ ಎಂಬ ಪುಟ್ಟ ಬಾಲಕ, ಈ ಕಿರುನಾಟಕದಲ್ಲಿ ಅಭಿನಯಿಸಿದ್ದ. ಅದುವರೆಗೂ ತನ್ನ ವಿಜ್ಞಾನದ ಚಟುವಟಿಕೆ ಬಗ್ಗೆ ಅವನು ನಿರಾಸಕ್ತಿ ಹೊಂದಿದ್ದ. ಆದರೆ ನಾಟಕದಲ್ಲಿ ಪಾತ್ರ ವಹಿಸಿದ ಮೇಲೆ ಬಾಲಕನ ಆತ್ಮಗೌರವ ಹೆಚ್ಚಿದ್ದು, ತನ್ನ ಶಾಲಾ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಿ ಮುಗಿಸಿ ತನ್ನ ಶಿಕ್ಷಕರಿಗೆ ತೋರಿಸತೊಡಗಿದ್ದ. ಅಷ್ಟೇ ಅಲ್ಲ, ಪ್ರತಿದಿನದ ಶಾಲಾ ಕೆಲಸಗಳ (ಅಸೈನ್ಮೆಂಟ್) ಬಗ್ಗೆ ಹೆಚ್ಚು ಗಮನ ಕೊಟ್ಟು ಅವುಗಳನ್ನು ಮುಗಿಸಲು ಪ್ರಯತ್ನಿಸತೊಡಗಿದ. ಜೊತೆಗೆ, ಶಾಲೆಯಲ್ಲಿ ಸದಾ ಮೌನವಾಗಿರುತ್ತಿದ್ದ ರತ್ನಾ ಕೂಡಾ, ತರಗತಿಯಲ್ಲಿ ಆತ್ಮವಿಶ್ವಾಸದಿಂದ ತನ್ನ ಅಭಿಪ್ರಾಯ ವ್ಯಕ್ತಪಡಿಸಲಾರಂಭಿಸಿದಳು. ನಾಟಕದಲ್ಲಿ ಅಭಿನಯಿಸಿದ ಪರಿಣಾಮವಾಗಿ ಸ್ವಾತಂತ್ರ್ಯ ಹೋರಾಟದ ದೃಶ್ಯಗಳಲ್ಲಿ ಅಭಿನಯಿಸಿದ ಬಳಿಕ ಮೌನಿ ಹುಡುಗ ಸುಹೈಲ್ ಸೇರಿದಂತೆ ಬಹುತೇಕ ಮಕ್ಕಳು ಆತ್ಮವಿಶ್ವಾಸದಿಂದ ತರಗತಿಯಲ್ಲಿ ಅಭಿಪ್ರಾಯ ಹಂಚಿಕೊಳ್ಳತೊಡಗಿದರು.

ಸದಾ ಕಲಿಕೆಯಲ್ಲಿ ತೊಂದರೆ ಅನುಭವಿಸುತ್ತಿದ್ದ ಫೈಝುಲ್, ತರಗತಿಯಲ್ಲೂ, ಇತರ ಎಲ್ಲಾ ಚಟುವಟಿಕೆಗಳಲ್ಲೂ ಹಿಂದೆ ಉಳಿಯಲು ಬಯಸುತ್ತಿದ್ದ. ಅವನು ಸಾಕಷ್ಟು ಹಿಂಜರಿಕೆ ವ್ಯಕ್ತಪಡಿಸಿ ಕೊನೆಗೂ ನಾಟಕದಲ್ಲಿ ಪಾತ್ರ ಮಾಡಲು ಒಪ್ಪಿಕೊಂಡ. ನಂತರ, ಒಂದು ನಾಟಕದಲ್ಲಿ ಉತ್ತಮವಾಗಿ ಪಾತ್ರ ನಿರ್ವಹಣೆ ಮಾಡಿದ

ಕಾರಣ ಶಾಲೆಯ ನಾಟಕ ತಂಡದಲ್ಲಿ ಮಕ್ಕಳು ಅವನನ್ನೂ ಸಂತೋಷದಿಂದ ಸೇರಿಸಿಕೊಂಡರು.

ಸರ್ದಾರ್‌ಗಲ್ಲಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಬರುತ್ತಿದ್ದ ಸರ್ಕಾರಿ ಬಾಲಮಂದಿರದ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧೀನದ ಬಾಲಕರ ಮಂದಿರ) ಮಕ್ಕಳು ನಾಟಕದಲ್ಲಿ ಕಸ ಗುಡಿಸುವಾತನ ಪಾತ್ರ ಮಾಡುತ್ತಿದ್ದ ಮಗುವನ್ನು ಹಾಸ್ಯ ಮಾಡಿ ನಗುತ್ತಿದ್ದರು. ಇದರಿಂದಾಗಿ ಎದೆಗುಂದಿದ ಆ ಬಾಲಕ ತಾನು ಪಾತ್ರ ಮಾಡುವುದಿಲ್ಲ ಎಂದು ಹೇಳಿದ. ಆದರೆ ನಾಟಕದ ಅಭ್ಯಾಸ ಮುಂದುವರಿದಂತೆ ಆ ಬಾಲಕ ತನ್ನ ಪಾತ್ರವನ್ನು ಚೆನ್ನಾಗಿ ಅರ್ಥ ಮಾಡಿಕೊಂಡನಲ್ಲದೆ, ನಾಟಕದಲ್ಲಿ ಆ ಪಾತ್ರಕ್ಕಿರುವ ಮಹತ್ವವನ್ನೂ ತಿಳಿದುಕೊಂಡು ಚೆನ್ನಾಗಿ ಅಭಿನಯಿಸತೊಡಗಿದ.

ಸರ್ದಾರ್‌ಗಲ್ಲಿ ಸ.ಹಿ.ಪ್ರಾ. ಶಾಲೆಯ ಇಬ್ಬರು ಮಕ್ಕಳ ಮಧ್ಯೆ ಗಾಂಧೀಜಿಯ ಪಾತ್ರಕ್ಕಾಗಿ ಸ್ಪರ್ಧೆ ಇತ್ತು. 'ಗಾಂಧೀಜಿಯ ಪಾತ್ರವನ್ನು ನಿರ್ವಹಿಸಲು ಬಯಸುವವರು ತಲೆಗೂದಲನ್ನು ಬೋಳಿಸಬೇಕು ಎಂದು ನಿರ್ದೇಶಕರು ಹೇಳಿದರು,. ಇಬ್ಬರುಅದಕ್ಕೂ ಸಿದ್ಧರಿದ್ದರು! ಅದೇ ವೇಳೆ, ಅವರಲ್ಲೊಬ್ಬ ಕೆಲದಿನ ಶಾಲೆಗೆ ಗೈರುಹಾಜರಾದ. ನಾಟಕದ ದಿನ ಇಬ್ಬರೂ ತಲೆ ಬೋಳಿಸಿಕೊಂಡು ಶಾಲೆಗೆ ಬಂದರು. ಕೊನೆಗೆ, ಅವರಲ್ಲೊಬ್ಬ ಮತ್ತೊಬ್ಬನಿಗೆ ಪಾತ್ರವನ್ನು ಬಿಟ್ಟುಕೊಟ್ಟ. ಆದರೆ ನಿರ್ದೇಶಕರು ಇಬ್ಬರಿಗೂ ಬೇರೆಬೇರೆ ದೃಶ್ಯಗಳಲ್ಲಿ ಗಾಂಧೀಜಿಯ ಪಾತ್ರ ನಿರ್ವಹಿಸಲು ಅವಕಾಶ ಮಾಡಿಕೊಟ್ಟರು. ಈ ಇಬ್ಬರ ಜೊತೆಗೆ, ಕಸ ಗುಡಿಸುವವನ (ಜಾಡಮಾಲಿ) ಪಾತ್ರ ಮಾಡಿದ ಹುಡುಗನಿಗೂ ಗಾಂಧೀಜಿ ಪಾತ್ರ ಮಾಡಲು ಅವಕಾಶ ನೀಡಲಾಯಿತು. ಒಂದೇ ನಾಟಕದಲ್ಲಿ ಮೂವರು ಬಾಲಕರು ಬೇರೆಬೇರೆ ದೃಶ್ಯಗಳಲ್ಲಿ ಗಾಂಧೀಜಿಯ ಪಾತ್ರವನ್ನು ನಿರ್ವಹಿಸಿದರು.

ಶಿಕ್ಷಕರ ಪ್ರತಿಕ್ರಿಯೆಗಳು

ಈ ನಾಟಕ ತಯಾರಿಯ ಸಂಪೂರ್ಣ ಪ್ರಕ್ರಿಯೆಯಲ್ಲಿ ಶಿಕ್ಷಕರು ಅತ್ಯಂತ ಮುತುವರ್ಜಿಯಿಂದ ಮತ್ತು ಆಸ್ಥೆಯಿಂದ ಭಾಗವಹಿಸಿ ಬೆಂಬಲಿಸಿದರು. ಕೊಪ್ಪಳ ಪಟ್ಟಣದ ಸರ್ದಾರ್‌ಗಲ್ಲಿಯ ಸ.ಹಿ.ಪ್ರಾ. ಶಾಲೆಗೆ ಬರುತ್ತಿದ್ದ ಸರ್ಕಾರಿ ಬಾಲಮಂದಿರದ ಬಾಲಕರು ಮುಕ್ತವಾಗಿ ನಾಟಕದಲ್ಲಿ ತೊಡಗಿಸಿಕೊಂಡಿದ್ದರು. ಪೂರ್ವಾನುಮತಿ ಇಲ್ಲದೆ ಯಾವುದೇ ಮಕ್ಕಳನ್ನು ಹೊರಗೆ ಕಳುಹಿಸಲು ಒಪ್ಪದ ಬಾಲಮಂದಿರದ ವಾರ್ಡನ್, ನಾಟಕಕ್ಕಾಗಿ ಮಕ್ಕಳನ್ನು ನಮ್ಮ ವಿನಂತಿಯಂತೆ ಹಲವು ಬಾರಿ ಬಾಲಮಂದಿರದಿಂದ ಶಾಲೆಗೆ ಕಳುಹಿಸಿಕೊಡುತ್ತಿದ್ದರು. ಮಕ್ಕಳಿಗೆ ಉತ್ತೇಜನ ನೀಡಲು ಅವರೂ ಮಕ್ಕಳೊಂದಿಗೆ ನಾಟಕದ ಅಭ್ಯಾಸವರ್ಗಕ್ಕೆ ಬರುತ್ತಿದ್ದರು. ಮಕ್ಕಳು ಅಭಿನಯದಲ್ಲಿ ತಲ್ಲೀನರಾಗಿರುವುದನ್ನು ಕಂಡು ಅವರೂ ಖುಷಿಪಟ್ಟರು. ನಾಟಕ ಪ್ರದರ್ಶನದ ದಿನ ಬಾಲಮಂದಿರದ ಎಲ್ಲಾ ಮಕ್ಕಳನ್ನು ಅವರು ಕರೆತಂದರು.

ಶಾಲೆಯೊಂದರಲ್ಲಿ ವಿಜ್ಞಾನ ಶಿಕ್ಷಕರಾಗಿದ್ದ, ನಾಟಕ ಕಲಾವಿದರೂ ಆಗಿದ್ದ ದಯಾನಂದ ಸಾಗರ್, ಈ ಹಿಂದೆ ವೇದಿಕೆ ಹತ್ತಲು ಹಿಂಜರಿಯುತ್ತಿದ್ದ ತಮ್ಮ ಶಾಲೆಯ ಎಂಟನೇ ತರಗತಿಯ ವಿದ್ಯಾರ್ಥಿನಿಯರು ಈ ನಾಟಕೋತ್ಸವದಲ್ಲಿ ಪಾಲ್ಗೊಂಡ ಬಳಿಕ ಹಿಂಜರಿಯುವುದು ಕಡಿಮೆಯಾಗಿದೆ ಎಂದು ಸಂತೋಷದಿಂದ ತಮ್ಮ ಅನುಭವವನ್ನು ಹಂಚಿಕೊಂಡರು. ನಾಟಕದಲ್ಲಿ ಸ್ವಚ್ಛತೆಯ ದೃಶ್ಯಗಳಲ್ಲಿ ಭಾಗವಹಿಸಿದ್ದ ಮಕ್ಕಳು ತಮ್ಮ ಸುತ್ತಲಿನ ಪರಿಸರವನ್ನು ಶುಚಿಯಾಗಿಡಲು ಬಯಸುತ್ತಿದ್ದುದನ್ನು ನಿಲೋಗಿಪುರ ಸ.ಹಿ.ಪ್ರಾ. ಶಾಲೆಯ ಶಿಕ್ಷಕ ಮುತ್ತುರಾಜ್ ಗುರುತಿಸಿದ್ದಾರೆ. ಅದೇ ಶಾಲೆಯ ಮಕ್ಕಳು ರಾಷ್ಟ್ರೀಯ ಹಬ್ಬಗಳ ಆಚರಣೆಯ ಬಗ್ಗೆ ಒಂದು ಕಿರುನಾಟಕವನ್ನು ಅರ್ಥಪೂರ್ಣವಾಗಿ ಪ್ರದರ್ಶಿಸಿದರು. ಆ ಮೂಲಕ ಪ್ರತಿ ರಾಷ್ಟ್ರೀಯ ಹಬ್ಬಗಳು ಮತ್ತು ಪ್ರಮುಖ ವ್ಯಕ್ತಿಗಳ ಜನ್ಮದಿನಾಚರಣೆಯ ಹಿನ್ನೆಲೆಯನ್ನು ಮಕ್ಕಳಿಗೆ ತಿಳಿಸಿಕೊಡಬೇಕಾದ ಪ್ರಾಮುಖ್ಯತೆಯನ್ನು ಶಿಕ್ಷಕರು ಅರಿತುಕೊಂಡರು. ಇದರ ಪರಿಣಾಮವಾಗಿ ವಿಶೇಷ ದಿನಗಳಲ್ಲಿ ರಾಷ್ಟ್ರೀಯ ನಾಯಕರ ಭಾವಚಿತ್ರಗಳನ್ನು ಇರಿಸಿ ಕಾಟಾಚಾರಕ್ಕೆಂಬಂತೆ ಗೌರವ ಅರ್ಪಿಸುವ ಸಂಪ್ರದಾಯವನ್ನು ಬಿಟ್ಟು, ಅಂಥ ದಿನಗಳ ಮಹತ್ವದ ಬಗ್ಗೆ ವಿದ್ಯಾರ್ಥಿಗಳಿಗಾಗಿ ಚರ್ಚೆ ಏರ್ಪಡಿಸಲು ಆರಂಭಿಸಿದರು.

ತಮ್ಮ ಶಾಲಾ ವಿದ್ಯಾರ್ಥಿಗಳು ಗಿಡಗಳಿಗೆ ನೀರುಣಿಸಲು, ಶಾಲಾ ಆವರಣವನ್ನು ಸ್ವಚ್ಛವಾಗಿಡಲು ಸ್ವಯಂಪ್ರೇರಣೆಯಿಂದ ಮುಂದೆ ಬರತೊಡಗಿದರಲ್ಲದೆ, ಗಾಂಧಿ ನಾಟಕದಲ್ಲಿ ಮಾಡಿದ ಪಾತ್ರವನ್ನು, ಅದರಿಂದ ಕಲಿತದ್ದನ್ನು ಶಾಲೆಯಲ್ಲಿ ಅನುಸರಿಸುತ್ತಾರೆಂದು ಹನುಮನಹಳ್ಳಿಯ ಸ. ಹಿ.ಪ್ರಾ. ಶಾಲೆಯ ಪ್ರಾಣೇಶ್ ಪೂಜಾರ್ ನೆನಪಿಸಿಕೊಳ್ಳುತ್ತಾರೆ. ಅಲ್ಲದೆ ಮಕ್ಕಳು ಶಾಲೆಯಲ್ಲಿ ಖುಷಿಯಲ್ಲಿ ದಿನವಿಡೀ ನಾಟಕದ ಸಂಭಾಷಣೆಗಳನ್ನು ಹೇಳಿಕೊಳ್ಳುತ್ತ ತಿರುಗುತ್ತಿರುತ್ತಾರೆಂದು ಗುರುತಿಸುತ್ತಾರೆ. ಇಷ್ಟೆಲ್ಲಾ ಧನಾತ್ಮಕ ಬದಲಾವಣೆಗಳನ್ನು ಗಮನಿಸಿದ ಬಳಿಕ, ಅವರಿಗೆ ವಿದ್ಯಾರ್ಥಿಗಳ ಮೂಲಕ ಮತ್ತಷ್ಟು ನಾಟಕಗಳನ್ನು ಪ್ರದರ್ಶಿಸುವ ಹುಮ್ಮಸ್ಸು ಬಂದಿದೆ ಎಂದು ಹೇಳುತ್ತಾರೆ.

ಇತರ ಪರಿಣಾಮಗಳು

ನಾಟಕದ ಪ್ರತಿ ಅಭ್ಯಾಸದ ವೇಳೆ, ಸನ್ನಿವೇಶ ಒಂದೇ ಇದ್ದರೂ ಸಂಭಾಷಣೆಗಳನ್ನು ನೆನಪಿಟ್ಟು ಹೇಳಲು ಸಾಧ್ಯವಾಗದೆ ಮಕ್ಕಳು ಬದಲಾಯಿಸಿ ಹೇಳುತ್ತಿದ್ದರು. ಆದರೂ ಮಕ್ಕಳ ಸಂಭಾಷಣೆಗಳು ನಾಟಕದ ಚೌಕಟ್ಟಿನಿಂದಾಚೆ ಹೋಗುತ್ತಿರಲಿಲ್ಲ. ಇಡೀ ನಾಟಕದ ಸಂಭಾಷಣೆಗಳನ್ನು ಮಕ್ಕಳು ವ್ಯಕ್ತಪಡಿಸಿದ ಗಾಂಧೀಜಿಯ ವಿವಿಧ ಸನ್ನಿವೇಶಗಳ ಬಗೆಗಿನ ಅಭಿಪ್ರಾಯಗಳನ್ನು ಅವಲಂಬಿಸಿಯೇ ಬರೆಯಲಾಗಿತ್ತು. ಗಾಂಧೀಜಿಯ ಬದುಕಿನ ವಿವಿಧ ಹಂತಗಳನ್ನು ಅಂದರೆ ಬಾಲ್ಯ, ಯೌವ್ವನ, ಶಿಕ್ಷಣ, ವೃತ್ತಿ ಮತ್ತು ದಕ್ಷಿಣ ಆಫ್ರಿಕಾದಲ್ಲಿನ ಹೋರಾಟ, ಸತ್ಯಾಗ್ರಹ ಮತ್ತು ಅವರು ನಂಬಿದ ಮತ್ತು ಬದುಕಿದ ಮೌಲ್ಯಗಳನ್ನು ಕಣ್ಣಿಗೆ ಕಟ್ಟುವಂತೆ ಪರಿಣಾಮಕಾರಿಯಾಗಿ ರಂಗಕ್ಕೆ ತರುವ ನಿಟ್ಟಿನಲ್ಲಿ ವಿದ್ಯಾರ್ಥಿಗ–ಳೊಂದಿಗೆ ಗಂಭೀರ ಚರ್ಚೆ ನಡೆಸಲಾಗಿತ್ತು. ಗಾಂಧೀಜಿಯ ವ್ಯಕ್ತಿತ್ವದಲ್ಲಿ ಒರಟುತನದಂತೆ ಕಾಣುತ್ತಿದ್ದ ಗಟ್ಟಿತನವನ್ನು ಮಕ್ಕಳು ಮನವರಿಕೆ ಮಾಡಿಕೊಂಡರು.

ಶಾಲೆಯಲ್ಲಿ, ಪಠ್ಯಪುಸ್ತಕದಲ್ಲಿ ಮತ್ತು ರೂಪಾಯಿ ನೋಟುಗಳಲ್ಲಿ ಮಾತ್ರ ನೋಡಿದ್ದ, 'ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟವರು ಎಂದು ರಾಷ್ಟ್ರೀಯ ದಿನಾಚರಣೆಗಳ ವೇಳೆ ಭಾಷಣದಲ್ಲಿ ಕೇಳಿದ್ದ ಗಾಂಧೀಜಿಯ ಚಿತ್ರ ಮತ್ತು ಬದುಕನ್ನು, ಅದರ ಗಂಧವನ್ನು ಮಕ್ಕಳು ಈಗ ನಾಟಕದ ಮೂಲಕ ಸ್ವತಃ ಅನುಭವಿಸತೊಡಗಿದರು. ಅಲ್ಲದೆ, ಅದನ್ನು ಪ್ರೇಕ್ಷಕರಿಗೂ ಉಣಬಡಿಸಿದರು.

ಯಾರಾದರೂ, ನೀವ್ಯಾಕೆ ಈ ನಾಟಕವನ್ನು ಪ್ರದರ್ಶಿಸುತ್ತಿದ್ದೀರಿ ಎಂದು ಮಕ್ಕಳನ್ನು ಪ್ರಶ್ನಿಸಿದರೆ, ಗಾಂಧೀಜಿ ತಮ್ಮ ಬದುಕಿನ ಮೂಲಕ ತಾವು ನಂಬಿದ ತತ್ವಗಳಂತೆ ಬದುಕಲು ಸಾಧ್ಯ ಎಂದು ಎಲ್ಲರಿಗೂ ತೋರಿಸಿಕೊಟ್ಟವರು. ಹಾಗಾಗಿ ಎಲ್ಲರೂ ಅವರನ್ನು ಅರ್ಥ ಮಾಡಿಕೊಂಡು ಅನುಸರಿಸಬೇಕು ಎಂದು ಉತ್ತರಿಸುತ್ತಿದ್ದರು. ಶೌಚಾಲಯಗಳನ್ನು ತೊಳೆಯುವುದರಿಂದ, ತಮ್ಮ ತಲೆಕೂದಲನ್ನು

ತಾವೇ ಕತ್ತರಿಸಿಕೊಳ್ಳುವ ಮೂಲಕ ಯಾವುದೇ ಕೆಲಸವೂ ಮೇಲು ಅಲ್ಲ ಕೀಳೂ ಅಲ್ಲ ಎಂಬುದನ್ನು ಗಾಂಧೀಜಿ ನಿರೂಪಿಸಿದರು ಎಂದು ಮಕ್ಕಳು ಗುರುತಿಸಬಲ್ಲವರಾಗಿದ್ದರು. ತಮ್ಮ ಹಕ್ಕುಗಳಿಗಾಗಿ ಅಹಿಂಸೆಯ ಮೂಲಕವೇ ಪರಿಣಾಮಕಾರಿಯಾಗಿ ಹೋರಾಡಲು ಸಾಧ್ಯ ಎಂಬುದನ್ನೂ ಗಾಂಧೀಜಿ ತೋರಿಸಿಕೊಟ್ಟರು ಎಂದು ಮಕ್ಕಳು ಅರ್ಥ ಮಾಡಿಕೊಂಡರು.

ಗಾಂಧೀಜಿ ತಮ್ಮ ಬದುಕಿನ ಮೂಲಕ ಯಾವ ಸಂದೇಶ ರವಾನಿಸಿದರು? ಅವುಗಳಲ್ಲಿ ವೈಯಕ್ತಿಕವಾಗಿ ನಿಮಗಿಷ್ಟವಾದುದು ಯಾವುದು? ಬದಲಾವಣೆ ತರುವುದು ಕಷ್ಟವೇ? ಹೌದಾದರೆ ಯಾಕೆ?– ಇಂತಹ ಪ್ರಶ್ನೆಗಳನ್ನು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಚರ್ಚಿಸಿದ್ದರು.


ಹುಡುಗರು ಮನೆಗೆಲಸಗಳಲ್ಲಿ ಸಹಾಯ ಮಾಡುವ ಕುರಿತ ಚರ್ಚೆ ಮಾತ್ರ ಅವರಿಗೆ ಹೊಸದಾಗಿತ್ತು ಹಾಗು ಅದು ಅವರಿಗೆ ಅಚ್ಚರಿಯದಾಗಿತ್ತು, ಮುಜುಗರ ಉಂಟು ಮಾಡಿತ್ತು ಆದರೆ ಮಕ್ಕಳು ಗಾಂಧಿ ತತ್ವ ಮತ್ತು ಸಂದೇಶಗಳನ್ನು ಮಾತ್ರ ಸಮರ್ಪಕವಾಗಿ ಮನವರಿಕೆ ಮಾಡಿಕೊಳ್ಳುತ್ತಿದ್ದರು. ಈ ಪ್ರಕ್ರಿಯೆಯಲ್ಲಿ, ವಿದ್ಯಾರ್ಥಿಗಳು ಮತ್ತು ಶಿಕ್ಷಕರು, ತಮ್ಮ ಹಳ್ಳಿಗಳಲ್ಲಿ ಜಾತಿ ಮತ್ತು ಲಿಂಗಾಧಾರಿತ ತಾರತಮ್ಯ ಜೀವಂತವಿರುವುದನ್ನು ಮುಕ್ತವಾಗಿ ಒಪ್ಪಿಕೊಂಡರು. ಅದನ್ನು ನಿರ್ಮೂಲನೆ ಮಾಡಬೇಕಾದರೆ ಎಲ್ಲರೂ ಒಗ್ಗಟ್ಟಿನಿಂದ ಹೋರಾಡಬೇಕು ಎಂಬುದು ಅವರೆಲ್ಲರ ದೃಷ್ಟಿಕೋನವಾಗಿತ್ತು.

ಸ್ವೀಕೃತಿಮಂಗಳೂರಿನ ರಂಗಭೂಮಿ ಕಲಾವಿದೆ, ಲೇಖಕಿಯಾಗಿರುವ ವಾಣಿ ಪೆರಿಯೋಡಿ ನಮಗೆ ಈ ಪ್ರಕ್ರಿಯೆಯಲ್ಲಿ ಸಹಕರಿಸಿದರು. ಅವರು ನಾಟಕಕ್ಕೆ ಬೇಕಾದ ಸಂಪನ್ಮೂಲ ಪರಿಕರಗಳನ್ನು ತಯಾರಿಸಿ ನೀಡಿದರಲ್ಲದೆ, ನಾಲ್ಕು ಶಾಲೆಗಳಿಗೆ ಭೇಟಿ ನೀಡಿ ಮಕ್ಕಳೊಂದಿಗೆ ಚರ್ಚಿಸಿದರು. ರಂಗ ಕಲಾವಿದ ಹಾಗೂ ವಿಸ್ತಾರ್ ನಾಟಕ ಶಾಲೆಯ ಪ್ರಾಂಶುಪಾಲರಾಗಿರುವ ಕೊಪ್ಪಳದ ಲಕ್ಷ್ಮಣ್ ಪಿರಾಗರ್ ಅವರು ಈ ನಾಟಕಗಳನ್ನು ಸಿದ್ಧಪಡಿಸಲು ನೆರವಾದರು.

Acknowledgements

Vani Periodi, theatre activist and writer from Mangalore, helped us with the process. She prepared and provided the resource materials for the plays and visited and interacted with the children of the four schools. Laxman Piragar, theatre activist and Principal of Visthar Theatre School of Koppal, helped us in preparing these plays.

***ಮಕ್ಕಳ ವೈಯಕ್ತಿಕ ಕಾರಣಕ್ಕಾಗಿ ಹೆಸರುಗಳನ್ನು ಬದಲಿಸಲಾಗಿದೆ.**



ಉಷಾ ಪ್ರೆಸಿಲ್ಲಾ ಅಂಬ್ರೋಸ್ ಅವರು, ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ದಶಕದಿಂದ ಕಾರ್ಯನಿರ್ವಹಿಸುತ್ತಿದ್ದು, ಕೊಪ್ಪಳದಲ್ಲಿ ತಂಡದ ಮುಖ್ಯಸ್ಥೆಯಾಗಿದ್ದಾರೆ. ರಾಜಕೀಯ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅವರು, ಹಿಂದುಳಿದ ವರ್ಗಗಳು ಮತ್ತು ಮಹಿಳಾ ಸಶಕ್ತೀಕರಣಕ್ಕಾಗಿ ಶ್ರಮಿಸುತ್ತಿದ್ದಾರೆ. ಚಿತ್ರಕಲೆ, ಸಾಹಿತ್ಯ, ಸಂಗೀತ ಮತ್ತು ಪ್ರವಾಸ ಅವರ ಆಸಕ್ತಿಯ ಕ್ಷೇತ್ರವಾಗಿದೆ. ಉಷಾ ಪ್ರೆಸಿಲ್ಲಾ ಅಂಬ್ರೋಸ್ ಅವರ ಸಂಪರ್ಕಕ್ಕೆ:

usha.ambrose@azimpremjifoundation.org

ಅನುವಾದ: **ರೋಹಿಣಿ ಮುಂಡಾಜೆ** । ಪರಿಶೀಲನೆ: **ಚಂದ್ರಶೇಖರ ಮಂಡೆಕೋಲು**